**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ, ಎಸ್.ಎಲ್ ಭೋಜೇಗೌಡ ಹಾಗೂ ಇತರರು ಮಂಡಿಸಿರುವ ನಿಯಮ 330ರ ಗಮನ ಸೆಳೆಯುವ ಸೂಚನೆಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಹೇಳಿಕೆ:**

**ವಿಷಯ:**ರಾಜ್ಯದಲ್ಲಿರುವ ಅನುದಾನಿತ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಲ್ಲಿ ಶೇ.50ರಷ್ಟಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇರುವುದರಿಂದ ಶಿಕ್ಷಣ ಗುಣಮಟ್ಟ ಕಾಯ್ದುಕೊಳ್ಳಲು ಬಹಳಷ್ಟು ತೊಂದರೆ ಆಗಿರುವ ಬಗ್ಗೆ ವಿಷಯ ಪ್ರಸ್ತಾಪಿಸುವುದು.

**ಉತ್ತರ:-**

- ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದ 164 ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಪದವಿ ಪೂರ್ವ ತರಗತಿಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ಆದೇಶದ ಸಂಖ್ಯೆ: ಕಾಶಿಇ:99:ಇತರೇ:ಆಡಳಿತ:2001, ದಿನಾಂಕ:09-05-2001 ರಲ್ಲಿ ಪದವಿಯಿಂದ ವಿಭಜಿತ ಪದವಿ ಪೂರ್ವ ಕಾಲೇಜುಗಳನ್ನಾಗಿ ವಿಭಜಿಸಿ ಆದೇಶಿಸಲಾಗಿದೆ. ಸದರಿ ಆದೇಶವು 2001-02ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿರುತ್ತದೆ. ಪದವಿ ಮತ್ತು ಪದವಿ ಪೂರ್ವ ಕಾಲೇಜುಗಳು ಒಟ್ಟಿಗೆ ನಡೆಯುತ್ತಿದ್ದ ಸಂದರ್ಭದಲ್ಲಿ ಸಹಾಯಾನುದಾನಕ್ಕೆ ಒಳಪಟ್ಟಿದ್ದು, ಬೇರ್ಪಟ್ಟ ನಂತರ ಪದವಿ ತರಗತಿಗಳಲ್ಲಿ ಮತ್ತು ಪದವಿ ಪೂರ್ವ ತರಗತಿಗಳಲ್ಲಿ ಮಂಜೂರಾಗಿರುವ ವಿಭಾಗಗಳಿಗನುಗುಣವಾಗಿ ಹುದ್ದೆಗಳನ್ನು ಹಸ್ತಾಂತರ ಮಾಡಲು ಕಾಲೇಜು ಶಿಕ್ಷಣ ಇಲಾಖೆಯು ಪದವಿ ಕಾಲೇಜಿನಲ್ಲಿ ತೆರವಾಗಿರುವ / ಖಾಲಿ ಇರುವ ಹುದ್ದೆಗಳಲ್ಲಿ ಪದವಿ ವಿಭಾಗಕ್ಕೆ ಅಗತ್ಯ ಇರುವ ಹುದ್ದೆಗಳನ್ನು ತನ್ನಲ್ಲಿಯೇ ಉಳಿಸಿಕೊಂಡು ಕಾರ್ಯಭಾರವಿರದ / ಉಳಿದ ಹುದ್ದೆಗಳನ್ನು ಆಯಾ ಪದವಿ ಪೂರ್ವ ಕಾಲೇಜುಗಳಿಗನುಗುಣವಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹಂತ ಹಂತವಾಗಿ ಹಸ್ತಾಂತರಿಸಿರುತ್ತದೆ.

- ಈ ರೀತಿ ಕಾಲೇಜು ಶಿಕ್ಷಣ ಇಲಾಖೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿದ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಪದವಿ ಪೂರ್ವ ಶಿಕ್ಷಣ ಇಲಾಖೆಯು ಸರ್ಕಾರದಿಂದ ಆಡಳಿತಾತ್ಮಕ ಅನುಮತಿ ಪಡೆದು ಹುದ್ದೆಗಳ ಭರ್ತಿಗೆ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.

- ರಾಜ್ಯದಲ್ಲಿ ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರ್ಪಟ್ಟ 164 ಪದವಿ ಪೂರ್ವ ಕಾಲೇಜುಗಳ ಪೈಕಿ ವಿದ್ಯಾರ್ಥಿಗಳ ದಾಖಲಾತಿ ಹೊಂದಿರುವ ಪ್ರಸ್ತುತ 156 ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

- ಖಾಸಗಿ ಅನುದಾನಿತ ಪದವಿ ವಿಭಜಿತ ಪದವಿ ಪೂರ್ವ ಕಾಲೇಜುಗಳಿಂದ ಹಸ್ತಾಂತರಗೊಂಡಿರುವ 796 ಹುದ್ದೆಗಳ ಪೈಕಿ ಸರ್ಕಾರವು ನಿಗದಿತ ಕಾರ್ಯಭಾರ ಹೊಂದಿರುವ 544 ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಅನುಮತಿಸಿದ ಹುದ್ದೆಗಳ ಪೈಕಿ 448 ಹುದ್ದೆಗಳನ್ನು ಭರ್ತಿ ಮಾಡಿದೆ. ಉಳಿದಂತಹ ಹುದ್ದೆಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯಿಂದ ಹುದ್ದೆ ಭರ್ತಿ ಸಂಬಂಧ ಇಲಾಖೆಗೆ ಸಲ್ಲಿತವಾಗುತ್ತಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹ ಹುದ್ದೆಗಳಿಗೆ ಭರ್ತಿ ಮಾಡಲು

2--

ಅನುಮತಿ ನೀಡಲಾಗುತ್ತಿದೆ. ಉಳಿದಂತೆ 96 ಹುದ್ದೆಗಳಲ್ಲಿ ನಿಗಧಿತ ಕಾರ್ಯಭಾರ, ವಿದ್ಯಾರ್ಥಿಗಳ ದಾಖಲಾತಿ ಹಾಗೂ ಇನ್ನಿತರ ಮಾನದಂಡ ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ಆಡಳಿತ ಮಂಡಳಿಗಳು ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ, ಆದರೆ ಈವರೆಗೂ ಅಂತಹ ಪ್ರಸ್ತಾವನೆ ಇಲಾಖೆಗೆ ಸಲ್ಲಿಸಿರುವುದಿಲ್ಲ.

- ಈ ರೀತಿ ಭರ್ತಿ ಮಾಡಿರುವ ಹುದ್ದೆಗಳ ಪೈಕಿ ವಿವಿಧ ಕಾರಣಗಳಿಂದ ಹುದ್ದೆ ತೆರವಾಗಿ, ಸದರಿ ತೆರವಾದ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ.

- ಒಂದು ವೇಳೆ ಪದವಿ ವಿಭಜಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪದವಿ ಕಾಲೇಜಿನಿಂದ ಹುದ್ದೆ ಹಸ್ತಾಂತರವಾಗದೆ ಅಥವಾ ಹಸ್ತಾಂತರವಾಗಿ ವಿವಿಧ ಕಾರಣಗಳಿಂದ ಹುದ್ದೆಗೆ ಭರ್ತಿಯಾಗದೆ ಅಥವಾ ಖಾಲಿಯಾದ ಸಂಧರ್ಭದಲ್ಲಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ಅಥವಾ ಅನುದಾನರಹಿತವಾಗಿ ನೇಮಿಸಿಕೊಂಡು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು